# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 368/2023**

**ಸಿ.ಡಬ್ಲೂಃ 05 ಪಿಡಬ್ಲೂಃ 07**

ಸಾಕ್ಷಿದಾರರ ಹೆಸರುಃ ಜ್ಯೋತಿನಾಯ್ಕ. ತಂದೆಃಚಂದ್ರಾನಾಯ್ಕ
ವಯಸ್ಸುಃ 41 ವರ್ಷ
ಉದ್ಯೋಗಃ ಪೊಲೀಸ ಕಾನ್ಸಟೇಬಲ ಇಟಗಿ ಪೊಲೀಸ್ ಠಾಣೆ.
ಸಾಕೀನಃ ಇಟಗಿ

ದಿಃ **29-05-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು ಜೂನ್ **2022** ರಿಂದ ಇಟಗಿ ಪೊಲೀಸ್ ಠಾಣೆಯಲ್ಲಿ ಪೊಲೀಸ ಕಾನ್ಸಟೇಬಲ ಆಗಿ ಕೆಲಸ ಮಾಡುತ್ತಿದ್ದೇನೆ.

**02.** ಸದರಿ ಪ್ರಕರಣದಲ್ಲಿ ದಿಃ **17-01-2023** ರಂದು ಬೆ.**8.05** ಗಂಟೆಗೆ ಸುಮಾರಿಗೆ ನಾನು ಮತ್ತು ಚಾ.ಸಾ.**04** ರವರು ಠಾಣೆಯಲ್ಲಿದ್ದಾಗ ಚಾ.ಸಾ.**01** ರವರು ನಮ್ಮನ್ನು ಕರೆದು, ಇಟಗಿ ಗ್ರಾಮದ ಕನ್ನಿಹಳ್ಳಿ ರಸ್ತೇಯ ಗಡ್ಡಿ ಸಂಗನಗೌಡ ಈತನ ಬಿಡಿ ಅಂಗಡಿಯ ಮುಂದೆ ಅಕ್ರಮವಾಗಿ ಮಧ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿರುವುದಾಗಿ ಖಚಿತ ಮಾಹಿತಿ ಬಂದಿರುತ್ತದೆ ದಾಳಿಗೆ ಹೋಗಬೇಕೆಂದು ತಿಳಿಸಿರುತ್ತಾರೆ. ಆಗ ಚಾ.ಸಾ.**01** ರವರು ಸದರಿ ದಾಳಿಗೆ ಹೋಗಲು ಚಾ.ಸಾ.**04** ರವರಿಗೆ ಇಬ್ಬರು ಪಂಚರನ್ನು ಕರೆತರಲು ತಿಳಿಸಿರುತ್ತಾರೆ ಅದರಂತೆ ಚಾ.ಸಾ.**04** ರವರು ಚಾ.ಸಾ.**02** ಮತ್ತು **03** ರವರನ್ನು ಕರೆದುಕೊಂಡು ಬಂದು ಚಾ.ಸಾ.**01** ರವರ ಮುಂದೆ ಹಾಜರುಪಡಿಸಿರುತ್ತಾರೆ. ಆಗ ಚಾ.ಸಾ.**01** ರವರು ಪಂಚರಿಗೆ ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ನಾನು ಚಾ.ಸಾ.**04** ಹಾಗೂ ಪಂಚರು ಚಾ.ಸಾ.**01** ರವರೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ ಬೆ.**08.15** ಗಂಟೆಗೆ ಠಾಣೆಯಿಂದ ಹೊರಟು ಇಟಗಿ ಗ್ರಾಮದ ಕನ್ನಿಹಳ್ಳಿ ರಸ್ತೇಗೆ ಬೆ. **08.25** ಕ್ಕೆ ಹೋಗಿ ನಮ್ಮ ವಾಹನವನ್ನು ನಿಲ್ಲಿಸಿ ಜೀಪಿನಿಂದ ಇಳಿದು ಸ್ವಲ್ಪ ದೂರದಲ್ಲಿ ನಿಂತು ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿ ಅಕ್ರಮವಾಗಿ ಒಂದು ಪ್ಲಾಸ್ಟಿಕ ಚೀಲದಲ್ಲಿ ಅಕ್ರಮವಾಗಿ ಮಧ್ಯ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುವುದನ್ನು ಖಾತ್ರಿ ಪಡೆಸಿಕೊಂಡು ಬೆ.**08.30** ಗಂಟೆಗೆ ಸದರಿ ವ್ಯಕ್ತಿಗಳ ಮೇಲೆ ದಾಳಿ ಮಾಡಿರುತ್ತೇನೆ. ಆಗ ನಾವು ದಾಳಿ ಮಾಡುತ್ತಿದ್ದಂತೆ ಅಲ್ಲಿ ಸೇರಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ಮಧ್ಯ ಮಾರಾಟ

ಮಾಡುತ್ತಿದ್ದ ವ್ಯಕ್ತಿಯೂ ಸಹ ಓಡಿ ಹೋಗಿರುತ್ತಾನೆ. ಸದರಿ ವ್ಯಕ್ತಿ ಗಡ್ಡಿ ಸಂಗನಗೌಡ ಎಂದು ಚಾ.ಸಾ.**01** ರವರೊಂದಿಗೆ ಮಾಹಿತಿ ಬಂದಿರುತ್ತದೆ. ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ **90** ಎಮ್.ಎಲ್.ನ ಓರಿಜಿನಲ್ ಚಾಯ್ಸ ವಿಸ್ಕೀಯ **38** ಪೌಚಗಳು ದೊರೆತಿರುತ್ತವೆ. ಸದರಿ ಪೌಚಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಅರಗಿನಿಂದ ಸೀಲು ಮಾಡಿ ಅದೇ ಪ್ಲಾಸ್ಟಿಕ ಚೀಲದಲ್ಲಿ ಹಾಕಿ ಚಾ.ಸಾ.**01** ಮತ್ತು ಪಂಚರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಬೆ.**08.35** ರಿಂದ **09.35** ಗಂಟೆಯವರೆಗೆ ಸ್ಥಳದಲ್ಲಿಯೇ ಪಂಚನಾಮೆ ಜರೂಗಿಸಿ ಮದ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡಿರುತ್ತೇವೆ. ನಂತರ ಬೆ.**09.45** ಗಂಟೆಗೆ ಠಾಣೆಗೆ ವಾಪಸ್ಸು ಬಂದು ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿಯೇ ಮಧ್ಯದ ಚೀಲವನ್ನು ಬಿಟ್ಟು ಓಡಿ ಹೋಗಿದ್ದ ವ್ಯಕ್ತಿಯ ವಿರುದ್ಧ ಚಾ.ಸಾ.**01** ರವರು ಚಾ.ಸಾ.**9** ರವರಿಗೆ ದೂರು ಸಲ್ಲಿಸಿರುತ್ತಾರೆ. ಸಾಕ್ಷಿಯು ನಿ.ಪಿ.**01** ರ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.**01** ಡಿ. ಎಂದು ಗುರುತಿಸಲಾಯಿತು. ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ಇರುವ ಮು.ಮಾ.**01** ರ ಓರಿಜಿನಲ್ ಚಾಯ್ಸ ವಿಸ್ಕೀಯ **38** ಖಾಲಿ ಪೌಚಗಳನ್ನು ಮತ್ತು ಘಟನಾ ಸ್ಥಳದಲ್ಲಿ ದೊರೆತ ಮು.ಮಾ.**02** ರ ಒಂದು ಪ್ಲಾಸ್ಟಿಕ ಚೀಲವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೇ ಎಂದು ನುಡಿದಿದ್ದು, ಇಂದು ಆರೋಪಿ ಗೈರು ಹಾಜರಾಗಿ ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಆತನನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿಯುತ್ತಾರೆ.

*(*ಅರೋಪಿತರ ಹಾಜರಾತಿಯನ್ನು ವಿನಾಯಿತಿ ಕೋರಿ ಅರೋಪಿಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರೋಪಿತರ ಗುರುತುವಿಕೆಯನ್ನು ವಿವಾಧಿಸುವುದಿಲ್ಲ ಎಂಬ ನಿಭಂದನೆ ಮೇರೆಗೆ ಸದರಿ ಅರ್ಜಿಯನ್ನು ಪುರಸ್ಕರಿಸಲಾಯಿತು.*)*

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಕೆ._ವಕೀಲರಿಂದಃ

**03.** ಪಂಚರನ್ನು ಒಳಗೊಂಡು **5** ಜನ ದಾಳಿಗಾಗಿ ಸರ್ಕಾರಿ ವಾಹನದಲ್ಲಿ ಹೋಗಿರುತ್ತೇವೆ. ಸರ್ಕಾರಿ ವಾಹನವನ್ನು ಕಾಳೇಶರವರು ಚಾಲನೆ ಮಾಡುತ್ತಿದ್ದರು. ನಮ್ಮ ಠಾಣೆಯಿಂದ ಇಟಗಿಯ ಕನ್ನಿಹಳ್ಳಿಯ ಕ್ರಾಸ **2** ಕಿಲೋ ಮಿಟರ ಆಗುತ್ತದೆ. ಕನ್ನಿಹಳ್ಳಿಯ ಕ್ರಾಸನಲ್ಲಿ ನಮ್ಮ ವಾಹನವನ್ನು ಉತ್ತರ ದಿಕ್ಕಿಗೆ ಮುಖಮಾಡಿ ನಿಲ್ಲಿಸಿರುತ್ತೇವೆ. ಘಟನಾ

ಸ್ಥಳದಲ್ಲಿ ಯಾರು ಇದ್ದರು ಮತ್ತು ಎಷ್ಟು ಜನ ಇದ್ದರು ಎಂದರೆ ನಮ್ಮನ್ನು ನೋಡಿ ಎಲ್ಲರೂ ಓಡಿ ಹೋಗಿರುತ್ತಾರೆ. ಅಲ್ಲಿ **5-6** ಜನ ಇದ್ದರು. ನಾವು ಘಟನಾ ಸ್ಥಳದಲ್ಲಿ ಫೋಟೋ ಆಗಲಿ ವಿಡಿಯೋ ಆಗಲಿ ಸೆರೆ ಹಿಡಿದಿರುವುದಿಲ್ಲ.

**04.** ಒಬ್ಬೊಬ್ಬ ಪಂಚರ ಒಂದು ಸಹಿಯನ್ನು ಪಡೆದಿರುತ್ತೇವೆ. ಪಂಚನಾಮೆಯನ್ನು ಚಾ.ಸಾ.**01** ರವರು ಬರೆದಿರುತ್ತಾರೆ. ಪಂಚರು ಸಹಿಯನ್ನು ಬೆ.**08.35** ರಿಂದ **09.35** ರ ಒಳಗೆ ಹಾಕಿರುತ್ತಾರೆ. ಗಡ್ಡಿ ಸಂಗನಗೌಡರ ಬೀಡಿ ಅಂಗಡಿಯು ಪೂರ್ವಕ್ಕೆ ಮುಖಮಾಡಿರುತ್ತದೆ. ಆ ದಿನ ಚಾ.ಸಾ.**1** ರವರು ಚಾ.ಸಾ.**4** ರವರಿಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು ಅದರಂತೆ ಚಾ.ಸಾ.**4** ರವರು ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿತನು ಘಟನಾ ಸ್ಥಳದಲ್ಲಿ ಆ ದಿನ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ದಾಳಿ ಮಾಡಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಮುದ್ದೆಮಾಲನ್ನು ಜಪ್ತು ಪಡೆಸಿಕೊಂಡು ಪಂಚರ ಸಹಿಯನ್ನು ಪಡೆದಿರುತ್ತೇವೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ.

**05.** ಆ ದಿನ ನಾವು ಯಾವುದೇ ದಾಳಿಗೆ ಹೋಗಿರುವುದಿಲ್ಲ, ಅಲ್ಲಿ ಆರೋಪಿತನು ಇರುವುದಿಲ್ಲ, ಏನನ್ನೂ ಸಹ ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

" ನನ್ನ ಸಮಕ್ಷಮ "

**Sd/-**

(ಶ್ರೀಮತಿ.ಅಕ್ಷತಾ ಟಿ .)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.